# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 788 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ\|\| ಎಂ.ಜಿ. ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18.08.2025 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಎಷ್ಟು ಕುಟುಂಬಗಳಿಗೆ ಪಡಿತರ ಚೀಟಿ ವಿತರಿಸಲಾಗಿದೆ; ಅವುಗಳ ಎಷ್ಟು ಕುಟುಂಬಗಳು ಅಂತ್ಯೋದಯ ಎಪಿಎಲ್ ಹಾಗೂ ಬಿ.ಪಿ.ಎಲ್ ವರ್ಗಕ್ಕೆ ಸೇರಿವೆ; ಕಳೆದ 3 ವರ್ಷಗಳಲ್ಲಿ ಹೊಸ ಪಡಿತರ ಚೀಟಿಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ ಈ ಕೆಳಕಂಡಂತೆ ಪಡಿತರ ಚೀಟಿಗಳು ಚಾಲ್ತಿಯಲ್ಲಿರುತ್ತದೆ.
<table>
<tr><th>ವಿವರ</th><th>ಪಡಿತರ ಚೀಟಿ ಸಂಖ್ಯೆ</th><th>ಫಲಾನುಭವಿಗಳ ಸಂಖ್ಯೆ</th></tr>
<tr><td>ಅಂತ್ಯೋದಯ ಅನ್ನ ಪಡಿತರ ಚೀಟಿ</td><td>10,76,942</td><td>43,96,248</td></tr>
<tr><td>ಆದ್ಯತಾ ಪಡಿತರ ಚೀಟಿ</td><td>1,17,31,508</td><td>4,09,75,963</td></tr>
<tr><td>ಆದ್ಯತೇತರ ಪಡಿತರ ಚೀಟಿ</td><td>25,57,419</td><td>87,41,704</td></tr>
<tr><td>ಒಟ್ಟು</td><td>1,53,65,869</td><td>5,41,13,915</td></tr>
</table>
ಕಳೆದ 3 ವರ್ಷಗಳಲ್ಲಿ ಆದ್ಯತಾ ಪಡಿತರ ಚೀಟಿ ಕೋರಿ 3,27,309 ಹಾಗೂ ಆದ್ಯತೇತರ ಪಡಿತರ ಚೀಟಿ ಕೋರಿ 1,30,694 ಅರ್ಜಿಗಳು ವಿಲೇವಾರಿಗೆ ಬಾಕಿ ಇರುತ್ತವೆ.</td></tr>
<tr><td>ಆ</td><td>ಅನ್ನಭಾಗ್ಯ ಯೋಜನೆಯಡಿ ಈಗ ಪಡಿತರ ಚೀಟಿದಾರರಿಗೆ ನೀಡಲಾಗುವ ಉಚಿತ ಅಕ್ಕಿ ಅಥವಾ ಧಾನ್ಯ ಪ್ರಮಾಣ ಎಷ್ಟು; ಈ ಯೋಜನೆಗಾಗಿ ಸರ್ಕಾರ ವಾರ್ಷಿಕ ಎಷ್ಟು ಹಣ ವೆಚ್ಚ ಮಾಡುತ್ತಿದೆ; ಯಾವುದೇ ತಾಲ್ಲೂಕಿನಲ್ಲಿ ಧಾನ್ಯ ವಿತರಣೆಯಲ್ಲಿ ವ್ಯತ್ಯಯ ಉಂಟಾದ ಪ್ರಕರಣಗಳೆಷ್ಟು; (ಸಂಪೂರ್ಣ ವಿವರ ನೀಡುವುದು)</td><td>ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ವತಿಯಿಂದ ಪಡಿತರ ಚೀಟಿದಾರರಿಗೆ ನೀಡಲಾಗುತ್ತಿರುವ ಆಹಾರ ಧಾನ್ಯದ ವಿವರ ಕೆಳಗಿನಂತಿದೆ.
<table>
<tr><th>ಪಡತರ ಚೀಟಿ ವಿಧ</th><th>ಪ್ರಮಾಣ</th><th>ದರ</th></tr>
<tr><td>ಅಂತ್ಯೋದಯ ಅನ್ನಯೋಜನೆ (AAY)</td><td>ಪ್ರತಿ ಪಡಿತರ ಚೀಟಿಗೆ 35 ಕೆ.ಜಿ ಆಹಾರ ಧಾನ್ಯಗಳನ್ನು ಪ್ರತಿ ಮಾಹೆ ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 14 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 21 ಕೆ.ಜಿ ರಾಗಿ/ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ.</td><td>ಉಚಿತ</td></tr>
</table></td></tr>
</table>

<table>
<tr>
<td></td>
<td></td>
<td>
<table>
<tr>
<td>ಆದ್ಯತಾ ಕುಟುಂಬ (PHH)</td>
<td>ಕೇಂದ್ರ ವ್ಯಾಪ್ತಿಯ ಆದ್ಯತಾ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ಪ್ರತಿ ಮಾಹೆ 5 ಕೆ.ಜಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದ್ದು, ಪ್ರಸ್ತುತ 2 ಕೆ.ಜಿ ಅಕ್ಕಿ ಮತ್ತು ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿದ 03 ಕೆ.ಜಿ ರಾಗಿ/ಜೋಳವನ್ನು ಹಂಚಿಕೆ ಮಾಡಲಾಗುತ್ತಿದೆ. ರಾಜ್ಯ ವ್ಯಾಪ್ತಿಯ ಆದ್ಯತ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ಪ್ರತಿ ಮಾಹೆ 5 ಕೆ.ಜಿ ಅಕ್ಕಿಯನ್ನು ಹಂಚಿಕೆ ಮಾಡಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಆನಾಸ 199 ಡಿಆರ್‌ಎ 2023 ದಿನಾಂಕ:19-02-2025 ರಂತೆ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ (AAY) ಮತ್ತು ಆದ್ಯತಾ ಪಡಿತರ ಚೀಟಿ (PHH) ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮುಖಾಂತರ ಹಣವನ್ನು ವರ್ಗಾಯಿಸುವ ಪ್ರಕ್ರಿಯೆಯ ಬದಲಾಗಿ ಫೆಬ್ರವರಿ 2025 ರ ಮಾಹೆಯಿಂದ ಅರ್ಹ ಪ್ರತಿ ಫಲಾನುಭವಿಗೆ 05 ಕೆ.ಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ.</td>
<td>ಉಚಿತ</td>
</tr>
</table>
2024-25ನೇ ಸಾಲಿನಲ್ಲಿ ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಅಥವಾ ಧಾನ್ಯ ವಿತರಣೆಗೆ ಸಂಬಂಧಿಸಿದಂತೆ ವಾರ್ಷಿಕ ರೂ. 152804.03 ಲಕ್ಷಗಳಷ್ಟು ವೆಚ್ಚ ಭರಿಸಲಾಗಿದೆ. ಧಾನ್ಯ ವಿತರಣೆಯಲ್ಲಿ ವ್ಯತ್ಯಯ ಉಂಟಾದ ಪ್ರಕರಣಗಳು ಕಂಡು ಬಂದಿರುವುದಿಲ್ಲ.
</td>
</tr>
<tr>
<td>ಇ</td>
<td>ರಾಜ್ಯಾಧ್ಯಂತ ಆಹಾರ ಸಂಗ್ರಹಿಸಲು ಗೋದಾಮುಗಳ ಸಂಖ್ಯೆ ಎಷ್ಟು; ಅವುಗಳ ಸಾಮರ್ಥ್ಯ ಹಾಗೂ ಶೇಕಡಾ ಎಷ್ಟು ಶೇಖರಣಾ ಸಾಮರ್ಥ್ಯ ಸರಾಸರಿ ಬಳಸಲಾಗುತ್ತಿದೆ;</td>
<td>ರಾಜ್ಯಾದ್ಯಂತ ಆಹಾರ ಸಂಗ್ರಹಿಸಲು ಗೋದಾಮುಗಳ ಸಂಖ್ಯೆ 310 ಗಳಾಗಿದ್ದು, ಅವುಗಳ ಸಾಮರ್ಥ್ಯ ಹಾಗೂ ಸರಾಸರಿ ಶೇಕಡವಾರು ಬಳಕೆ ಕುರಿತು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td>
</tr>
</table>

| | | |
|---|---|---|
| ಈ | ಅತೀವ ಮಳೆಯಿಂದ ಅಥವಾ ಬರಪೀಡಿತ ಪ್ರದೇಶಗಳಲ್ಲಿ ಪಡಿತರ ವಿತರಣೆಯಲ್ಲಿ ವಿಳಂಬ ಅಥವಾ ಕೊರತೆಯಿರುವ ಪ್ರಕರಣಗಳು ದಾಖಲಾಗಿದೆಯೇ; ದಾಖಲಾಗಿದ್ದಲ್ಲಿ. ಸರ್ಕಾರ ಈ ಬಗ್ಗೆ ಯಾವ ಕ್ರಮಕೈಗೊಂಡಿದೆ; | ಈ ರೀತಿಯ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಉ | ರಾಜ್ಯದಲ್ಲಿ ಪಡಿತರ ವಿತರಣೆಯನ್ನು ಡಿಜಿಟಲ್ ಕಾರಣ ವ್ಯವಸ್ಥೆ ಮಾಡಿದ್ದು; ಯಶಸ್ಸು ಕಂಡಿದೆಯೇ; KYC, OTP ತಪಾಸಣೆ ಹಾಗೂ ಪಾಸ್‌ವರ್ಡ್ ತೊಂದರೆಗಳಿಂದ ಸಾರ್ವಜನಿಕರಿಗೆ ಏನಾದರೂ ತೊಂದರೆ ಉಂಟಾಗಿದೆಯೇ; ಉಂಟಾಗಿದ್ದಲ್ಲಿ, ಈ ಕುರಿತು ಸರ್ಕಾರದ ಕ್ರಮವೇನು; | ರಾಜ್ಯದಲ್ಲಿ ಪಡಿತರ ವಿತರಣೆಯನ್ನು ಡಿಜಿಟಲ್ ವ್ಯವಸ್ಥೆ ಕಾರಣ ಯಶಸ್ಸು ಕಂಡಿರುತ್ತದೆ.<br>KYC, OTP ತಪಾಸಣೆ ಹಾಗೂ ಪಾಸ್‌ವರ್ಡ್ ತೊಂದರೆಗಳಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗಿರುವುದಿಲ್ಲ. ಒಂದು ವೇಳೆ ತಾಂತ್ರಿಕ ಸಮಸ್ಯೆ ಕಂಡು ಬಂದಲ್ಲಿ ತಕ್ಷಣವೆ ಪರಿಹರಿಸಲು ಕ್ರಮವಹಿಸಲಾಗುತ್ತಿದೆ. |
| ಊ | ಪಡಿತರ ಚೀಟಿಗೆ ಅಗತ್ಯವಿರುವ ಧಾನ್ಯಗಳು ಮತ್ತುಬೆಳೆಗಳನ್ನು ಸರ್ಕಾರ ಯಾವ ಯಾವ ರಾಜ್ಯಗಳಿಂದ ಖರೀದಿಸುತ್ತಿದೆ; ಇತ್ತೀಚಿನ ಮೂರು ವರ್ಷಗಳಲ್ಲಿ ಪ್ರತಿ ರಾಜ್ಯದಿಂದ ಖರೀದಿಸಿದ ಧಾನ್ಯದ ಪ್ರಮಾಣ ಎಷ್ಟು? (ವೆಚ್ಚದ ವಿವರ ನೀಡುವುದು) | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013 (NFSA) ರನ್ವಯ ಪ್ರತಿ ಮಾಹೆ ಕೇಂದ್ರದಿಂದ 2,17,403 ಮೆ.ಟನ್ ಆಹಾರ ಧಾನ್ಯ ಪ್ರಮಾಣವನ್ನು ಉಚಿತವಾಗಿ ಬಿಡುಗಡೆಗೊಳಿಸುತ್ತಿದ್ದು ಕೇಂದ್ರ ವ್ಯಾಪ್ತಿ ಎನ್.ಎಫ್.ಎಸ್.ಎ ಫಲಾನುಭವಿಗಳಿಗೆ ಉಚಿತವಾಗಿ ಹಂಚಿಕೆ ನೀಡಲಾಗುತ್ತಿದೆ.<br>ರಾಜ್ಯದಲ್ಲಿನ 51.29 ಲಕ್ಷ ಹೆಚ್ಚುವರಿ ಎನ್.ಎಫ್.ಎಸ್.ಎ ಆದ್ಯತಾ ಫಲಾನುಭವಿಗಳಿಗೆ ಮತ್ತು ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ ಪ್ರತಿ ಆದ್ಯತಾ ಫಲಾನುಭವಿಗೆ 5 ಕೆ.ಜಿ ಯಂತೆ ನೀಡುತ್ತಿರುವ ಅಕ್ಕಿಯನ್ನು ಭಾರತೀಯ ಆಹಾರ ನಿಗಮದಿಂದ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ (ಓಎಂಎಸ್‌ಎಸ್) ಯಡಿ ರಾಜ್ಯ ಸರ್ಕಾರದಿಂದ ಖರೀದಿಸಲಾಗುತ್ತಿದ್ದು, ಹೊರ ರಾಜ್ಯಗಳಿಂದ ಪಡಿತರ ಚೀಟಿಗೆ ಅಗತ್ಯವಿರುವ ಧಾನ್ಯವನ್ನು ಖರೀದಿಸುತ್ತಿರುವುದಿಲ್ಲ. |

ಇ- ಆನಾಸ 217 ಡಿಆರ್‌ಎ 2025

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

Q.NO-788

| ಕ್ರ.ಸಂ | ಜಿಲ್ಲೆಯ ಹೆಸರು | ಗೋದಾಮುಗಳ ಸಂಖ್ಯೆ | ಶೇಖರಣಾ ಸಾಮರ್ಥ್ಯ (ಮೆ.ಟನ್) | ಸರಾಸರಿ |
|---|---|---|---|---|
| 1 | ಬಾಗಲಕೋಟೆ | 11 | 17375 | 100 |
| 2 | ಬೆಂಗಳೂರು | 9 | 11300 | 100 |
| 3 | ಪೂರ್ವ ವಲಯ | 2 | 1450 | 100 |
| 4 | ಉತ್ತರ ವಲಯ | 3 | 800 | 100 |
| 5 | ದಕ್ಷಿಣ ವಲಯ | 6 | 3100 | 100 |
| 6 | ಪಶ್ಚಿಮ ವಲಯ | 4 | 4400 | 100 |
| 7 | ಬೆಂಗಳೂರು ಗ್ರಾಮಾಂತರ | 5 | 6470 | 100 |
| 8 | ಬೆಳಗಾವಿ | 20 | 37130 | 100 |
| 9 | ಬಳ್ಳಾರಿ | 7 | 10900 | 100 |
| 10 | ಬೀದರ್ | 9 | 14325 | 100 |
| 11 | ವಿಜಯಪುರ | 14 | 16330 | 100 |
| 12 | ಚಾಮರಾಜನಗರ | 8 | 7166 | 95 |
| 13 | ಚಿಕ್ಕಮಗಳೂರು | 12 | 14330 | 100 |
| 14 | ಚಿತ್ರದುರ್ಗ | 10 | 11700 | 100 |
| 15 | ಚಿಕ್ಕಬಳ್ಳಾಪುರ | 6 | 11888 | 90 |
| 16 | ದಕ್ಷಿಣ ಕನ್ನಡ | 11 | 72510 | 100 |
| 17 | ದಾವಣಗೆರೆ | 9 | 19800 | 100 |
| 18 | ಧಾರವಾಡ | 9 | 13459 | 100 |
| 19 | ಗದಗ | 8 | 11110 | 90 |
| 20 | ಕಲುಬುರಗಿ | 13 | 19380 | 100 |
| 21 | ಹಾಸನ | 10 | 13255 | 100 |
| 22 | ಹಾವೇರಿ | 8 | 51660 | 80 |
| 23 | ಕೊಡಗು | 8 | 10400 | 100 |
| 24 | ಕೋಲಾರ | 8 | 13760 | 100 |
| 25 | ಕೊಪ್ಪಳ | 4 | 15042 | 100 |
| 26 | ಮಂಡ್ಯ | 11 | 19800 | 100 |
| 27 | ಮೈಸೂರು | 16 | 26963 | 100 |
| 28 | ರಾಯಚೂರು | 5 | 17865 | 100 |
| 29 | ರಾಮನಗರ | 8 | 9800 | 100 |
| 30 | ಶಿವಮೊಗ್ಗ | 10 | 13000 | 100 |
| 31 | ತುಮಕೂರು | 12 | 19800 | 100 |
| 32 | ಉಡುಪಿ | 7 | 8310 | 100 |
| 33 | ಉತ್ತರ ಕನ್ನಡ | 13 | 9320 | 100 |
| 34 | ಯಾದಗಿರಿ | 6 | 11950 | 100 |
| 35 | ವಿಜಯನಗರ | 8 | 10500 | 100 |
| | ಒಟ್ಟು | 310 | 556348 | |